ವಿಷಯ:- ಬೆಂಗಳೂರು ನಗರದ ಹಸಿರು ಪಟ್ಟಿ ವಲಯ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 467 (2371)

ಶ್ರೀ ಡಿ.ಹಲಗೇಗೌಡ (ಪಾಂಡವಪುರ):- ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಗಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ ?

ಅ ಬೆಂಗಳೂರು ನಗರದ ಸುತ್ತಮುತ್ತ ಹಸಿರು ಪಟ್ಟಿ ವಲಯವನ್ನು ರಚಿಸಿರುವುದು ನಿಜವೇ ? ಹಾಗಿದ್ದರೆ , ಎಷ್ಟು ದೂರದವರೆವಿಗೆ ಹಸಿರು ಪಟ್ಟಿ ವಲಯವನ್ನು ರಚಿಸಲಾಗಿದೆ.

ಆ ಬೆಂಗಳೂರು ದಕ್ಷಿಣ ತಾಲ್ಲೂಕು ಹೂಡಿ ಗ್ರಾಮದ ವ್ಯಾಪ್ತಿಯಲ್ಲಿರುವ ಸೊಣ್ಣೇನಹಳ್ಳಿ ಗ್ರಾಮದ ಸರ್ವೆ ನಂಬರ್ 12 ರಿಂದ 23 ರವರೆವಿಗೆ ಇರುವ ಜಮೀನುಗಳು ಹಸಿರುಪಟ್ಟಿ ವಲಯಕ್ಕೆ ಸೇರಿರುವುದು ನಿಜವೆ.

ಇ ಸೊಣ್ಣೇನಹಳ್ಳಿ ಗ್ರಾಮದ ಸರ್ವೆ ನಂಬರ್ 12 ರಿಂದ 23 ರವೆರೆವಿಗೆ ಇರುವ ಜಮೀನನ್ನು ಕೈಗಾರಿಕಾ ಪ್ರದೇಶಾಭಿವೃದ್ಧಿ ನಿಗಮಕ್ಕೋಸ್ಕರ ಸ್ವಾಧೀನ ಪಡಿಸಿಕೊಳ್ಳಲು ಪ್ರಯತ್ನ ನಡೆಯುತ್ತಿರುವುದು ನಿಜವೇ.

ಈ ಹಾಗಾದರೆ, ಹಸಿರು ಪಟ್ಟಿ ವಲಯದ ತೀರ್ಮಾನಕ್ಕೆ ವಿರುದ್ಧವಲ್ಲವೇ.

ಉ ಜಮೀನು ಅಪಾರವಾಗಿದ್ದರೂ ದೊಡ್ಡ ಹಿಡುವಳಿಯ ಪಕ್ಕದಲ್ಲಿಯೇ ಹಸಿರು ಪಟ್ಟಿ ವಲಯಕ್ಕೆ ಸೇರಿದ ಸಣ್ಣ ಹಿಡುವಳಿ ಜಮೀನನ್ನು ವಶಪಡಿಸಿಕೊಳ್ಳಲು ನಿರ್ಧರಿಸಿರುವ ಉದ್ದೇಶವೇನು ?

ಶ್ರೀಮತಿ ಮನೋರಮಾ ಮದ್ವರಾಜ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ ನಿಜ, ಸುಮಾರು 20 ರಿಂದ 25 ಕಿ.ಮೀ ವರೆಗೆ ಹಸಿರು ಪಟ್ಟಿ ವಲಯವು ಇರುತ್ತದೆ.

ಆ ನಿಜ, ಸೊಣ್ಣೇನಹಳ್ಳಿ ಗ್ರಾಮದ ಸರ್ವೆ ನಂಬರ್ 13 ರಿಂದ 23 ರವರೆವೆಗೆ ಇರುವ ಜಮೀನುಗಳು ಹಸಿರು ವಲಯ ಪಟ್ಟಿಯಲ್ಲಿ ಬರುತ್ತವೆ.

ಇ ನಿಜ, ಸೊಣ್ಣೇನಹಳ್ಳಿ ಗ್ರಾಮದ ಸರ್ವೆ ನಂಬರ್ 13 ರಿಂದ 23 ರವರೆವೆಗೆ ಇರುವ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗಿದೆ.

ಈ ಸದರಿ ಜಮೀನುಗಳ ಸೂಕ್ತ ಭೂ ಬಳಕೆ ಬದಲಾವಣೆ ಬಗ್ಗೆ ವಿಷಯವು ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯ ಪರಿಶೀಲನೆಯಲ್ಲಿದೆ.

ಉ ಉದ್ದೇಶಿತ ರಫ್ತು ಉದ್ಯಮ ನಲಯ ಸ್ಥಾಪಿಸಬೇಕಾಗಿರುವುದರಿಂದ ಹಸಿರು ಪಟ್ಟಿಯಲ್ಲಿ ಬರುವ ಜಮೀನನ್ನು ಭೂ ಸ್ವಾಧೀನ ಪಡಿಸಿಕೊಳ್ಳುವುದು ಅನಿವಾರ್ಯವಾಗಿರುತ್ತದೆ. ಈ ವಲಯಕ್ಕಾಗಿ ಬೇಕಾಗಿರುವ ಒಟ್ಟು ಜಮೀನು440 ಎಕರೆ ಇದರಲ್ಲಿ ಹಸಿರು ಪಟ್ಟಿಯಲ್ಲಿ ಬರುವ 390 ಎಕರೆ ಜಮೀನನ್ನು ವಶಪಡಿಸಿಕೊಳ್ಳಲು ಹಾಗೂ ಭೂ ಬಳಕೆ ಪರಿವರ್ತನೆ ಮಂಜೂರಾತಿಯ ವಿಷಯ ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯ ಪರಿಶೀಲನೆಯಲ್ಲಿರುತ್ತದೆ. ಹಾಗೂ ಈ ಜಮೀನನ್ನು ಸ್ವಾಧೀನಪಡಿಸಿಕೊಳ್ಳದ ಹೊರತು ಜಮೀನಿನ ಆಯಕಟ್ಟು ಸರಿಹೊಂದದ ಕಾರಣ ಭೂ ಸ್ವಾಧೀನ ಅನಿವಾರ್ಯವಾಗಿರುತ್ತದೆ.

ಶ್ರೀ ಡಿ.ಹಲಗೇ ಗೌಡ :- ಮಾನ್ಯ ಅಧ್ಯಕ್ಷರೆ, ನಾನು ಕೇಳಿರತಕ್ಕ ಎಲ್ಲ ಪ್ರಶ್ನೆಗಳಿಗೂ ಹೌದು ಹೌದು ಎನ್ನತಕ್ಕ ಉತ್ತರ ಬಂದಿದೆ. ಅಂದರೆ ಬೆಂಗಳೂರಿನ ಸುತ್ತಮುತ್ತ ಸುಮಾರು 20-25 ಕಿ.ಮೀಟರ್‌ವರೆಗೆ ಹಸಿರು ಪಟ್ಟಿಯ ವಲಯವನ್ನು ನಿರ್ಮಿಸಿದೆ ಎಂದು ಇದೆ. ಹೀಗೆ ಒಂದು ಸಾರಿ ಹಸಿರು ಪಟ್ಟಿ ವಲಯವನ್ನು ನಿರ್ಮಿಸಿ, ಅದೇ ಜಮೀನನ್ನು ಅದೇ ಭಾಗವನ್ನು ಪುನ: ಸ್ವಾಧೀನಪಡಿಸಿಕೊಳ್ಳತಕ್ಕಂಥ ಕಾಯಕ್ರಮ ಸರಿಯೇ ? ಈ ಹಸಿರು ಪಟ್ಟಿ ವಲಯನ್ನು ನಿರ್ಮಿಸತಕ್ಕ ಉದ್ದೇಶಕ್ಕೆ ಇದು ವಿರುದ್ಧ ಆಲ್ಲವೇ ? ಬೆಂಗಳೂರು ಪಟ್ಟಣದ ಸುತ್ತಮುತ್ತ

ಪರಿಸರ ಮಾಲಿನ್ಯದಿಂದಾಗಿ ಹಸಿರು ಪಟ್ಟಿಯನ್ನು ನಿರ್ಮಿಸಬೇಕೆನ್ನತಕ್ಕ ತೀರ್ಮಾನಕ್ಕೆ ಬಂದು ಪುನ:ಅದನ ತೆಗೆದುಕೊಂಡು ಅಲ್ಲೇ ಹೆಚ್ಚು ಕಾರ್ಖಾನೆಗಳನ್ನು ಸ್ಥಾಪಿಸುವುದಕ್ಕೋಸ್ಕರವಾಗಲೀ ಮಾಡತಕ್ಕದ್ದು ಹಸಿರು ಪಟ್ಟ ವಲಯದ ಉದ್ದೇಶವನ್ನೇ ವಿಫಲಗೊಳಿಸುವಂತಾಗಲಿಲ್ಲವೇ ? ಐದನೇ ಪ್ರಶ್ನೆಗೆ ಉತ್ತರವಾಗಿ ಉದ್ದೇಶಿತ ರಕ್ಷ ಉದ್ಯಮ ವಲಯವನ್ನು ಸ್ಥಾಪಿಸಬೇಕಾಗಿರುವುದರಿಂದ ಇದನ್ನು ಮಾಡಬೇಕಾಗಿದೆ ಎಂದು ಹೇಳಿದ್ದೀರಿ. ನಾವ ಅದನ್ನು ಸ್ವಾಗತಿಸುತ್ತೇವೆ. ಆದರೆ ಇದಕ್ಕೋಸ್ಕರ ಆ ಹಸಿರು ಪಟ್ಟಿ ವಲಯ ಅಥವಾ ಒಳಭಾಗದಲ್ಲಿರತಕ್ಕ ಕೇವಲ ಗರೀಬರು. ಬಡವರು, ಸಣ್ಣ ಹಿಡುವಳಿದಾರರು , ಕೇವಲ ಒಂದು ಎಕರೆ, ಎರಡು ಎಕರೆಗಳನ್ನು ಇಟ್ಟುಕೊಂಡಿರುವವ ಜಮೀನನ್ನು ಮಾತ್ರ ಸ್ವಾಧೀನ ಪಡಿಸಿಕೊಳ್ಳುವುದಕ್ಕೆ ಹೊರಟು ಪಕ್ಕದಲ್ಲೇ ಇರತಕ್ಕಂಥ ದೊಡ್ಡ ದೊಡ್ಡ ಜಮೀನ್ದಾರರ ಜಮೀನನ್ನು ಹಾಗೆಯೇ ಬಿಟ್ಟು ಹೊರಟಿದ್ದಾರೆ.. ಇದು ಸಣ್ಣ ಹಿಡುವಳಿ ದಾರರಿಗೆ ಮಾಡತಕ್ ಅನ್ಯಾಯ ಅಲ್ಲವೇ ? ಹಾಗೆ ದೊಡ್ಡ ಹಿಡುವಳಿದಾರರ ಜಮೀನನ್ನು ಇಲ್ಲಿ ಮೊದಲು ಕೈಗಾರಿಕೆಗಳ ಸ್ಥಾಪನೆಯಾದ ಮೇಲೆ ದೊಡ್ಡ ಹಿಂಡುವಳಿದಾರರು ಹೆಚ್ಚು ಹೆಚ್ಚು ಹಣವನ್ನು ಸಂಪಾದನೆ ಮಾಡುವ ಉದ್ದೇಶದಿಂದ ಅಧಿಕಾರಿಗಳ ಜೊತೆಯಲ್ಲಿ ಶಾಮೀಲಾಗಿ ಬಡವರಿಗೆ ಈ ರೀತಿ ತೊಂದರೆಯನ್ನು ಕೊಡುವುದಕ್ ಹೊರಟಿದ್ದಾರೆ. ಇದನ್ನು ಸರ್ಕಾರ ಪರಿಶೀಲಿಸಿ ಬಡವರಿಗೆ ಅನುಕೂಲ ಮಾಡಿಕೊಟ್ಟು ದೊಡ್ಡ ದೊಡ್ಡ ಜಮೀನುಗಳನ್ನು ಸ್ವಾಧೀನಪಡಿಸಿಕೊಂಡು ಈ ಕಾರ್ಯವನ್ನು ಮಾಡಲಿಕ್ಕೆ ಆಗುವುದಿಲ್ಲವೇ ಎನ್ನತಕ್ಕ ಮಾತನ್ನು ಮಾನ್ಯ ಮಂತ್ರಿಗಳಿಗೆ ಕೇಳಲಿಕ್ಕೆ ಬಯಸುತ್ತೇನೆ.

ಶ್ರಿ ಮನೋರಮಾ ಮದ್ವರಾಜ್:- ನಮ್ಮ ರಾಜ್ಯ ಸರ್ಕಾರವು 1984 ರಲ್ಲಿ ಈ ಏರಿಯಾವನ್ನು ಎಕ್ಸ್‌ಪೋರ್ಟ್ ಓರಿಯೆಂಟೆಡ್ ಇಂಡಸ್ಟ್ರೀಸ್ ಜೋನ್ ಎಂದು ಮಾಡಿದ್ದಾರೆ. ಆ ಕೂಡಲೇ ಲ್ಯಾಂಡ್ ಅಕ್ವಿಜಿಷನ್ ಪ್ರೊಸೀಡಿಂಗ್ಸ್ ಪ್ರಾರಂಭವಾಗಿದೆ. ಮಾನ್ಯ ಹಲಗೇಗೌಡರ ಕಳಕಳಿ ಏನೆಂದು ನನಗೆ ಅರ್ಥವಾಗಿದೆ. ಅವರು ದೊಡ್ಡ ಹಿಂಡುವಳಿದಾರರ ಜಾಗವನ್ನು ಬಿಟ್ಟು ಸಣ್ಣ ಹಿಡುವಳಿದಾರರ ಜಾಗವನ್ನು ಅಕ್ವೈರ್ ಮಾಡುತ್ತಾರೆಂದು ಹೇಳಿದ್ದಾರೆ. ಈ ವಿಷಯದಲ್ಲಿ ನಾನೂ ಕೂಡ ಕೂಲಂಕಷವಾಗಿ ಪರಿಶೀಲನೆ ಮಾಡಬೇಕಾಗುತ್ತದೆ. ನಾನು ಸ್ವತ: ಆ ಜಾಗಕ್ಕೆ ಹೋಗಿ ನೋಡಿ ಅಲ್ಲಿ ಏನಾದರೂ ಅನ್ಯಾಯವಾಗಿದ್ದರೆ ಅದನ್ನು ಸರಿಪಡಿಸಲಿಕ್ಕೆ ಖಂಡಿತ ಪ್ರಯತ್ನ ಪಡುತ್ತೇನೆ.

SMT.DAMAYANTHI BOREGOWDA:- It is so inevitable, you acquire only those lands. Why don't you acquire adjacent lands to Green Belt area.

ಶ್ರಿ ಮನೋರಮಾ ಮಧ್ವರಾಜ್:- ಈಗಾಗಲೇ ಆ ಭಾಗದಲ್ಲಿ ಇಂಡಸ್ಟ್ರಿಯಲ್ ಏರಿಯಾ ಬೆಳವಣಿಗೆಯಾಗಿದೆ. ಸುತ್ತಮುತ್ತ ಬೇಕಾದಷ್ಟು ಇಂಡಸ್ಟ್ರೀಸ್ ಇರುವುದರಿಂದ ಆ ಜಾಗವನ್ನು ಅಕ್ವೈರ್ ಮಾಡಬೇಕಾಗುತ್ತದೆ.

ಶ್ರಿ ಡಿ.ಹಲಗೇಗೌಡ:- ಅಕ್ವೈರ್ ಮಾಡುವುದರಲ್ಲಿ ನಮ್ಮದು ಏನೂ ಅಭ್ಯಂತರವಿಲ್ಲ. ಕೈಗಾರಿಕೆಗೆ ಜಮೀನು ಬೇಕಾಗುತ್ತದೆ. ಆದರೂ ಮಧ್ಯೆ ಮಧ್ಯೆ ಹೋಗಿ, ಅವರಿಗೆ ಬೇಕಾದ್ದನ್ನು ಅಕ್ವೈರ್ ಮಾಡಿಕೊಳ್ಳುವುದು. ಯಾರ್ಯಾರಿಗೆ ಬೇಕೋ ಅದನ್ನು ಬಿಟ್ಟು ಆ ಜಾಗವನ್ನು ಅವರ ಸ್ವಂತ ಉಪಯೋಗಕ್ಕೆ ಅನುಕೂಲವಾಗುವ ಹಾಗೆ ಅನುಕೂಲಮಾಡಿಕೊಳ್ಳತಕ್ಕದ್ದು ಸರಿಯಲ್ಲ. ಇದರ ಬಗ್ಗೆ ನಾನು ತಮಗೆ ನಕ್ಷೆಯನ್ನು ಕೊಡುತ್ತೇವೆ. ಮಧ್ಯೆ ಹೇಗೆ ಹೇಗೆ ಬಿಟ್ಟಿದ್ದಾರೆ ಎನ್ನುವುದು ತಿಳಿಯುತ್ತದೆ. ತಾವು ನೋಡಿ ಒಳ್ಳೆಯ ತೀರ್ಮಾನ ತೆಗೆದುಕೊಳ್ಳಿ.

ಛೇರ್ಮನ್:- ಮಾನ್ಯ ಹಲಗೇಗೌಡ್ರೇ ಮಂತ್ರಿಗಳು ಉತ್ತರದಲ್ಲಿ ಸ್ಪಷ್ಟಪಡಿಸಿದ್ದಾರೆ.

ಶ್ರಿಮತಿ ಮನೋರಮಾ ಮಧ್ವರಾಜ್:- ಖಂಡಿತ ಅನ್ಯಾಯವಾಗಿದ್ದರೆ ನಾನು ಸರಿಪಡಿಸುತ್ತೇನೆಂದು ಆಶ್ವಾಸನೆ ಕೊಡುತ್ತೇನೆ.

ಶ್ರೀ ಎ.ಕೆ.ಅನಂತಕೃಷ್ಣ :- ಹಸಿರು ಪಟ್ಟಿಯ ನಿಯಮಗಳ ಉಲ್ಲಂಘನೆಯನ್ನು ಮಾಡುವುದರಲ್ಲಿ ಏನಾದರೂ ಪದ್ಧತಿಯನ್ನು ಅನುಸರಿಸುತ್ತಿದ್ದೀರಾ ?

ಶ್ರೀಮತಿ ಮನೋರಮಾ ಮಧ್ವರಾಜ್ :- ಉಲ್ಲಂಘನೆಯಾಗುವುದಿಲ್ಲ. ಅದನ್ನು ನಾವು ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಗೆ ಭೂ ಬಳಕೆ ಪರಿವರ್ತನೆಯನ್ನು ಮಾಡಲಿಕ್ಕೆ. . . .

ಶ್ರೀ ಎ.ಕೆ.ಅನಂತಕೃಷ್ಣ :- ಆಗುತ್ತಿದೆಯಲ್ಲಾ ಅದಕ್ಕೆ ಏನಾದರೂ ಮಾಡುತ್ತೀರಾ? ಅದಕ್ಕೆ ಪದೇ ಪದೇ ಮಂತ್ರಿಗಳು ಉಲ್ಲಂಘನೆಯನ್ನು ಮಾಡಬಾರದೆಂದು ಹೇಳಿಕೆಯನ್ನು ಕೊಡುತ್ತಾರೆ. ಆದರೆ ಜನ ಉಲ್ಲಂಘನೆಯಾಗುತ್ತಿದೆ ಎಂದು ಹೇಳುತ್ತಿದ್ದಾರೆ. ನಡೆಯುವುದು ನಡೆಯುತ್ತಾ ಇದೆ.

ಶ್ರೀಮತಿ ಮನೋರಮಾ ಮಧ್ವರಾಜ್ :- ಇದು ಹೆಚ್.ಯು.ಡಿ. ಡಿಪಾರ್ಟ್‌ಮೆಂಟಿಗೆ ಬರುತ್ತದೆ. ಅವರು ನಮಗೆ ಕೊಡಬೇಕು. ಭೂ ಬಳಕೆಯ ಪರಿವರ್ತನೆ ಅವರು ಮಾಡಬೇಕು. ಅವರು ಮಾಡದಿದ್ದರೆ ಆಗುವುದಿಲ್ಲ.

ಶ್ರೀ ಎ.ಕೆ.ಅನಂತಕೃಷ್ಣ :- ಈ ಪ್ರಶ್ನೆಯನ್ನೇ entertain ಮಾಡಬಾರದಾಗಿತ್ತು.

ಶ್ರೀಮತಿ ದಮಯಂತಿ ಬೋರೇಗೌಡ:- ಇವರು ಆ ಜಮೀನನ್ನು ಕೇಳಿದ್ದರಿಂದ ಹೆಚ್.ಯು.ಡಿ. ಯವರು ರೆಕಮಂಡ್ ಮಾಡುತ್ತಾರೆ.

ವಿಷಯ:- ಹರಿಜನ ಗಿರಿಜನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ನಿಲಯ ನಿರ್ಮಿಸುವ ಬಗ್ಗೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 469 (2312)

ಶ್ರೀ ಕರಿಯಣ್ಣ (ಹೊಳೆಹೊನ್ನೂರು):- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.?

ಅ 1991-92ನೇ ಸಾಲಿನಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಎಷ್ಟು ಹರಿಜನ ಗಿರಿಜನರಿಗೆ ಹಾಸ್ಟಲ್‌ಗಳನ್ನು ಮಂಜೂರು ಮಾಡಲಾಗಿದೆ ?

ಆ ಇದರಲ್ಲಿ, ಹೊಸ ಕಟ್ಟಡಗಳೆಷ್ಟು?ಮತ್ತು ಹಳೆ ಕಟ್ಟಡಗೆಳೆಷ್ಟು? ಮತ್ತು ಕಾಲೇಜುಗಳಲ್ಲಿ ಓದುವ ವಿದ್ಯಾರ್ಥಿಗಳಿಗೆ ಎಷ್ಟು ಹೊಸ ಹಾಸ್ಟಲ್ ಕಟ್ಟಡಗಳನ್ನು 1991-92ನೇ ಸಾಲಿನಲ್ಲಿ ಮಂಜೂರು ಮಾಡಲಾಗಿದೆ? (ವಿವರ ನೀಡುವುದು)

ಇ ಹಾಗಿದ್ದಲ್ಲಿ, ಹೊಸ ಕಟ್ಟಡಗಳು ಮಂಜೂರು ಆಗಿದ್ದರೆ, ಇವುಗಳು ಪೂರ್ಣಗೊಂಡಿರುವುದೇ? ಅಥವಾ ಇಲ್ಲವೇ? ಎಂಬುದನ್ನು ಅಂಕಿಅಂಶಗಳೊಂದಿಗೆ ತಿಳಿಸುವುದು?

ಬಿ.ಶಿವಣ್ಣ (ಸಮಾಜ ಕಲ್ಯಾಣ ಸಚಿವರು)

ಅ ಐದು.

ಆ 1991-92ರಲ್ಲಿ ಮಂಜೂರು ಮಾಡಿರುವ ವಿದ್ಯಾರ್ಥಿನಿಲಯಗಳು ಹೊಸ ಕಟ್ಟಡದಲ್ಲಿ ಇರುವುದಿಲ್ಲ. ಮತ್ತು ಯಾವುದೇ ಫೆಟ್ರಿಕ್ ನಂತರದ ವಸತಿನಿಲಯಗಳಿಗೆ ಮಂಜೂರಾತಿ ನೀಡಿರುವುದಿಲ್ಲ.

ಇ 1991-92ರಲ್ಲಿ ಹೊಸ ಕಟ್ಟಡಕ್ಕೆ ಮಂಜೂರಾತಿ ನೀಡದೇ ಇರುವುದರಿಂದ, ಉತ್ತರ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಕರಿಯಣ್ಣ :- ಮಾನ್ಯ ಅಧ್ಯಕ್ಷರೇ, ಶಿವಮೊಗ್ಗ ಜಿಲ್ಲೆಗೆ 1992-93ನೇ ಸಾಲಿನಲ್ಲಿ ಐದು ಹೊಸ ಹಾಸ್ಟೆಲ್‌ಗಳು ಮಂಜೂರು ಆಗಿದೆಯೆಂದು ಹೇಳಿದ್ದಾರೆ. ಆ 5 ಹಾಸ್ಟೆಲ್‌ಗಳು ಯಾವ್ಯಾವ ತಾಲ್ಲೂಕುಗಳಲ್ಲಿ ಮಂಜೂರು ಆಗಿದೆ ಎನ್ನತಕ್ಕಂಥಾದ್ದನ್ನು ದಯಮಾಡಿ ಹೇಳಬೇಕು. ಹಾಗೂ 1991-92ನೇ ಸಾಲಿನಲ್ಲಿ ಎಷ್ಟು ಕಟ್ಟಡಗಳನ್ನು ಮಂಜೂರು ಮಾಡಿದ್ದೀರಿ ಎಂದು ಕೇಳಿದ್ದಕ್ಕೆ ಈ ಕಟ್ಟಡಗಳ ಮಂಜೂರಾತಿ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಹಾಗಿದ್ದಲ್ಲಿ, 1991-92ನೇ ಸಾಲಿನಲ್ಲಿ ಹರಿಜನ, ಗಿರಿಜನ